ಸುಬ್ರಾಯ ಚೊಕ್ಕಾಡಿ

# ಕನ್ನಡ ತಾಯಿಗೆ ನಮನ

**ನಮಿಸುವೆ** ನಿನಗೆ ಕನ್ನಡ ತಾಯೇ
ಹಸಿರುಡೆಯಲ್ಲಿಹ ಮಾಯೇ
ನಾಡಿನ ಕಣಕಣದಲ್ಲೂ ಅಡಗಿಹ
ನೀ ನಮ್ಮೆಲ್ಲರ ಕಾಯೇ.

ಹಕ್ಕಿಗಳಿಂಚರ, ಮರಗಳ ಮರ್ಮರ
ನದಿಗಳ ಜುಳುಜುಳು ಹರಿವು
ಬೀಸುವ ಗಾಳಿಯ ಉಸಿರಲು ನಿನ್ನದೆ
ಹೆಸರಿನ ಹಾಡಿನ ಚೆಲುವು.

ಕಲ್ಲು ಕಲ್ಲಿನಲಿ ನಿನ್ನದೆ ಗುರುತು
ರಾಗ ವಿರಾಗದ ನೆನಪು
ಕವಿ ಗಾಯಕರು ಮೊಳಗಿಸುತಿರುವ
ನಿನ್ನಯ ಹಾಡಿನ ಒನಪು.

ನೆಲದಭಿಮಾನವು ಕರಗದ ಹಾಗೆ
ಎಲ್ಲರನೂ ಅಣಿಗೊಳಿಸು
ಸುಮಧುರ ನುಡಿಯನು ಎಲ್ಲೆಡೆಯಲ್ಲೂ
ತಾಯೇ, ನೀ ನೆಲೆಗೊಳಿಸು.



ವಾಗೀಶ ಹೆಗಡೆ